<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 137/2020**

| | | | |
|---|---|---|---|
| ಸಾಕ್ಷಿಯ ಹೆಸರು | ಶ್ರೀ. ಕೆಂಪೇಗೌಡ | ಚಾಸಾಃ | ಫ್ರಾಸಾಃ |
| ತಂದೆಯ ಹೆಸರು | ರಮೇಶ್ | 7 | 14 |
| ವಯಸ್ಸು | 31 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **03.07.2026.** | |
| ಉದ್ಯೋಗ | ಚಾಲಕ | | |
| ವಾಸ ಸ್ಥಳ | ಕುಣಿಗಲ್ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನಾನು ಚಾಲಕನಾಗಿ ಕಳೆದ 10 ವರ್ಷಗಳಿಂದ BBMP ಯಲ್ಲಿ ಲಸ ಮಾಡುತ್ತಿದ್ದೇನೆ. ನಾನು ಅಂದ್ರಹಳ್ಳಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ 1, 2 ಮತ್ತು 5 ನೇ ಆರೋಪಿತರ ಪರಿಚಯ ಇದೆ. ಅವರು 4 - 5 ವರ್ಷಗಳಿಂದ ಪರಿಚಯ. ಆರೋಪಿತರು ನನಗೆ ಯಾವುದೇ ವಿಚಾರ ತಿಳಿಸಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ. ನಾನು ಆ ದಿನ ಕೆಲಸಕ್ಕೆ ಹೋಗಿದ್ದೆ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ಆರೋಪಿತರ ಪಕ್ಕದ ಮನೆಯಲ್ಲಿ ನಾನು ಮೊದಲು ವಾಸ ಇದ್ದೆ. ದಿನಾಂಕ 17.02.2020 ರಂದು ಬೆಳಗ್ಗೆ 8.00 ಗಂಟೆಗೆ ನವೀನ್ ನನಗೆ ಕರೆ ಮಾಡಿ ಮನು ರವರ ಮಾವ ಪ್ರಸನ್ನ ಕುಮಾರ್ ರವರ ಮೊಬೈಲ್ ಅನ್ನು ಕಳವು ಮಾಡಿದ್ದು, ಅವನು ಮತ್ತು ಅವನ ಸ್ನೇಹಿತರನ್ನು ಕಿಡ್ನಾಪ್ ಮಾಡಿಕೊಂಡು ಬಂದು ಅಂಜನಾ ನಗರದ ಕಾಡಿನಲ್ಲಿ ಇದ್ದೇವೆ ಅದಕ್ಕೆ ಮನು ಗೆ ಕರೆ ಮಾಡಿ ಮೊಬೈಲ್ ಬಾಬ್ತು 5,000/- ಕೊಟ್ಟರೆ ಪ್ರಸನ್ನ ಕುಮಾರ್ ರವರನ್ನು ಬಿಡುವುದಾಗಿ ಹೇಳುವಂತ ಹೇಳಿದ. ನಾನು ಮನುಗೆ ಕರೆ ಮಾಡಿ ಪ್ರಸನ್ನ ಕುಮಾರ್ ಎಂಬುವವರು ನಿಮ್ಮ ಭಾವನ ಮೊಬೈಲ್ ತೆಗೆದುಕೊಂಡಿದ್ದಾರೆ ಎಂದು ನವೀನ್, ಅವಿನಾಶ್ ಇತರರು ಎತ್ತಿಕೊಂಡು ಬಂದಿದ್ದಾರೆಂತೆ ಆ ಬಾಬ್ತು 5,000/- ಕೊಟ್ಟರೆ ಬಿಡುತ್ತಾರೆ

ಎಂದು ಹೇಳಿದ್ದು, ಆಗ ನಾನು ಎಲ್ಲಿಗೆ ಬರಬೇಕು ಎಂದು ಕೇಳಿದಾಗ MRP ಹೇರೊಹಳ್ಳಿ ಎಂದು ಹೇಳಿದ ಎಂದರೆ ಸರಿ ಅಲ್ಲ. ಅವರು 20 ನಿಮಿಷಗಳ ನಂತರ ತನ್ನ ಆಟೋ ತೆಗೆದುಕೊಂಡು ಬಂದು ನನ್ನನ್ನು ಕರೆದುಕೊಂಡು ಹೋಗಿ ಪದ್ಮಾವತಿ ಬಾರ್ ರಸ್ತೆಯಲ್ಲಿ ಆಟೋ ರಸ್ತೆ ಬದಿ ನಿಲ್ಲಿಸಿ ಕಾಡಿನ ಒಳಗೆ ಕರೆದುಕೊಂಡು ಹೋಗ ಅಲ್ಲಿ ನೋಡಿದಾಗ ಪ್ರಸನ್ನ ಕುಮಾರ್ ರಾಜೇಶ್, ಚಂದ್ರಶೇಖರ್ ಎನ್ನುವವರು ಇದ್ದರು ಎಂದು ಹೇಳಿದ ಎಂದರೆ ಸರಿ ಅಲ್ಲ. ಅವರಿಗೆ ತುಂಬಾ ಹೊಡೆದಿದ್ದು ಸುಸ್ತಾದಂತೆ ಕಂಡು ಬಂದಿದ್ದು ನವೀನ್, ಅವಿನಾಶ್ ಮತ್ತು ಇತರ 3 ಜನರು ಇದ್ದರು ಎಂದರೆ ಸರಿ ಅಲ್ಲ. ನಾನು ಮನುನನ್ನು ನವೀನ್ ಮತ್ತು ಅವಿನಾಶ್ ರವರಿಗೆ ಪರಿಚಯ ಮಾಡಿಕೊಟ್ಟಿದ್ದು ನವೀನ್, ಮನುವನ್ನು ಉದ್ದೇಶಿಸಿ ನಿನ್ನ ಭಾವ ಮೊಬೈಲ್ ಕಳ್ಳತನ ಮಾಡಿದ್ದಾನೆ ಅದನ್ನು ತರಿಸಿಕೊಡು ಎಂದು ಕೇಳಿದ ಎಂದರೆ ಸರಿ ಅಲ್ಲ. ಆಗ ನಾನು ಪ್ರಸನ್ನ ಕುಮಾರ್ ನನ್ನು ಕೇಳಿದ್ದಕೆ ತಾನು ಯಾವುದೇ ಮೊಬೈಲ್ ತೆಗೆದುಕೊಂಡಿಲ್ಲ ಎಂದು ಹೇಳಿ ಹೋದ ನಂತರ 3 ಜನರಿಂದ ತಲಾ 5,000/- ರೂಪಾಯಿ ಕೊಡಿಸುವಂತೆ ಕೇಳಿದರು ಎಂದರೆ ಸರಿ ಅಲ್ಲ. ನಾನು ಅದರ ಸಂಬಂಧವಾಗಿ ವಿವರವಾದ ಹೇಳಿಕೆ ನೀಡಿದ್ದೇನೆ ಎಂದರೆ ಸರಿ ಅಲ್ಲ. ಸಾಕ್ಷಿ ಹೇಳಿಕೆಯ ಭಾಗವನ್ನು ಓದಿ ತೋರಿಸಿದಾಗ ಸಾಕ್ಷಿ ನಿರಾಕರಿಸಿದ್ದರಿಂದ ಸದರಿ ಹೇಳಿಕೆಯ ಭಾಗವನ್ನು ನಿಶಾನೆ.ಪಿ. 27 ಎಂದು ಗುರುತಿಸಲಾಯಿತು. ನವೀನ್, ಅವಿನಾಶ್ ಆರೋಪಿತರು ನನ್ನ ಸ್ನೇಹಿತರಾಗಿದ್ದು ಹಾಗೂ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನವೀನ್ ಮತ್ತು ಅವಿನಾಶ್ ಪ್ರಸನ್ನ ಕುಮಾರ್ ನನ್ನು ಹೊಡೆದು ಕೊಲೆ ಮಾಡಿದ್ದರು ಎಂದು ತಿಳಿಯಿತು ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ : ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.